**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ/513/ಎಸಿಎಂ(2)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:11-06-2018.

**-::: ತಿದ್ದುಪಡಿ ಜ್ಞಾಪನ :::-**

**ವಿಷಯ:** **2018-19**ನೇ ಸಾಲಿನಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ **"ನೋಡಲ್ ಸೆಂಟರ್" ಗಳಲ್ಲಿ ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್** ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ನಿರ್ದೇಶಕರ ನಾಮಿನಿಯವರನ್ನು ನೇಮಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸಮಸಂಖ್ಯೆ ಜ್ಞಾಪನ ಪತ್ರ ದಿ:07-06-2018.

**-0000000-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **2018-19**ನೇ ಸಾಲಿನ ರಾಜ್ಯದಲ್ಲಿನ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ **"ನೋಡಲ್ ಸೆಂಟರ್" ಗಳಲ್ಲಿ** ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದ ಪೂರ್ವಭಾವಿ ಸಿದ್ಧತೆಗಳನ್ನು ಹಾಗೂ ಪ್ರವೇಶ ಸಂಬಂಧ ಎಲ್ಲಾ ಉಸ್ತುವಾರಿಯನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನಿರ್ದೇಶಕರ ನಾಮಿನಿಯಾಗಿ ಉಲ್ಲೇಖಿತ ಈ ಕಛೇರಿ ಜ್ಞಾಪನದಲ್ಲಿ ನಿಯೋಜಿಸಲಾಗಿತ್ತು.

ಮುಂದುವರೆದಂತೆ, ಈ ಕೆಳಕಂಡ ನೋಡಲ್ ಸೆಂಟರ್‌ಗಳಿಗೆ ನಿಯೋಜಿಸಲಾಗಿದ್ದ ಅಧಿಕಾರಿಯವರನ್ನು ಬದಲಾವಣೆ ಮಾಡಿ ಪ್ರವೇಶ ಸಂಬಂಧ ಕಾರ್ಯನಿರ್ವಹಿಸಲು ಈ ಕೆಳಕಂಡ ಅಧಿಕಾರಿಯವರನ್ನು ನಿರ್ದೇಶಕರ ನಾಮಿನಿಯಾಗಿ ನಿಯೋಜಿಸಲಾಗಿದೆ. ಹೊಸದಾದ ನೋಡಲ್ ಸೆಂಟರ್‌ಗೆ ಹಾಗೂ ನೋಡಲ್ ಸೆಂಟರ್‌ಗೆ ನಿಯೋಜಿಸಲಾಗಿದ್ದ ಅಧಿಕಾರಿಯ ಜೊತೆಗೆ ಹೆಚ್ಚುವರಿಯಾಗಿ ಪ್ರವೇಶ ಸಂಬಂಧ ಕಾರ್ಯನಿರ್ವಹಿಸಲು ಈ ಕೆಳಕಂಡಂತೆ ಅಧಿಕಾರಿಯವರನ್ನು ನಿಯೋಜಿಸಲಾಗಿದೆ.

| ಕ್ರ. ಸಂ. | **ಕಾರ್ಯನಿರ್ವಹಿಸಬೇಕಾದ ನೋಡಲ್ ಸೆಂಟರ್‌ನ ಹೆಸರು** | **ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ನಿಯೋಜಿಸಲಾದ ಅಧಿಕಾರಿಯವರು**<br>**ಶ್ರೀಯುತರಾದ** |
|---|---|---|
| 01 | ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | ಆರ್.ಮಂಜುನಾಥ್, ಪ್ರಾಂಶುಪಾಲರು,<br>ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ,<br>ಹೆಸರಘಟ್ಟ, ಬೆಂಗಳೂರು |

| ಕ್ರ ಸಂ. | **ಕಾರ್ಯನಿರ್ವಹಿಸಬೇಕಾದ ನೋಡಲ್ ಸೆಂಟರ್‌ನ ಹೆಸರು** | **ಪ್ರಸ್ತುತ ನಿಯೋಜಿಸಲಾಗಿದ್ದ ಅಧಿಕಾರಿಯವರು**<br>**ಶ್ರೀಯುತರಾದ** | **ಬದಲಾವಣೆ ಮಾಡಿ ನಿಯೋಜಿಸಲಾದ ಅಧಿಕಾರಿಯವರು**<br>**ಶ್ರೀಯುತರಾದ** |
|---|---|---|---|
| 01 | ಶ್ರೀಮತಿ.ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ | ಡಾ॥ ಮಹದೇವ ಪ್ರಸಾದ್.ಎಂ.ಎಸ್,<br>ಪ್ರಾಂಶುಪಾಲರು,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ | ರಾಮಣ್ಣ.ಜೆ, ಆ.ಶ್ರೇ.ಉಪನ್ಯಾಸಕರು,<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ |
| 02 | ಸಿ.ವಿ.ಚರಂತಿಮಠ ರೂರಲ್ ಪಾಲಿಟೆಕ್ನಿಕ್, ಹುನಗುಂದ (ಅನುದಾನಿತ) | ಭೋಗೇಶ್ ರಾವ್, ಉಪನ್ಯಾಸಕರು,<br>ಇ&ಸಿ ವಿಭಾಗ,<br>ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ | ಜನಾದ್ರಿ.ಸಿ.ಎಸ್, ಆ.ಶ್ರೇ.ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ |
| 03 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | -- | ಗೋಪಾಲ್.ಕೆ., ಆ.ಶ್ರೇ.ಉಪನ್ಯಾಸಕರು,<br>ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು |

ಮೇಲ್ಕಂಡಂತೆ ಬದಲಾವಣೆ ಮಾಡಿ ನಿಯೋಜಿಸಲಾದ ಅಧಿಕಾರಿಯವರು ಕಾರ್ಯನಿರ್ವಹಿಸಲು ಸೂಚಿಸಿರುವ ನೋಡಲ್ ಸೆಂಟರ್‌ಗೆ ದಿ:12-06-2018ರಂದು ಕಾರ್ಯ ವರದಿ ಮಾಡಿಕೊಂಡು, 2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಾತಿ ಸಂಬಂಧ ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಸೀಟು ಹಂಚಿಕೆ ಪ್ರಕ್ರಿಯೆಯನ್ನು **ನೋಡಲ್ ಸೆಂಟರ್**‌ಗಳಲ್ಲಿ ನಡೆಸಲು ಪೂರ್ವಭಾವಿ ಸಿದ್ಧತೆ ಪೂರ್ಣಗೊಳಿಸಿ ಹಾಗೂ ಪ್ರಸಕ್ತ ಸಾಲಿನ ಪ್ರವೇಶ ಪ್ರಕ್ರಿಯೆ ಮುಕ್ತಾಯವಾಗುವವರೆಗೂ ನಿಯೋಜಿಸಿರುವ ಸಂಬಂಧಪಟ್ಟ **ನೋಡಲ್ ಸೆಂಟರ್**‌ಗಳಲ್ಲಿ ನಿರ್ದೇಶಕರ ನಾಮಿನಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಇದಲ್ಲದೇ, ಪ್ರಸಕ್ತ ಸಾಲಿನಲ್ಲಿ ಈಗಾಗಲೇ ನೀಡಲಾಗಿರುವ ಪ್ರವೇಶಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ನಿಯಮಗಳ ಪ್ರಕಾರ ಪರಿಶೀಲಿಸಿ ಆಗಿಂದಾಗ್ಗೆ ವರದಿಯನ್ನು ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಅಂತಿಮ ವರದಿಯನ್ನು ನಿರ್ದೇಶನಾಲಯಕ್ಕೆ ನೀಡುವುದು.

E-mail – hutalawar@yahoo.co.in & dtekartc@gmail.com

ನಿರ್ದೇಶಕರು

11/06/18

ಗೆ,

*ಮೇಲ್ಕಂಡ ಎಲ್ಲಾ ಅಧಿಕಾರಿಗಳಿಗೆ,*

ಪ್ರತಿ:–

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂ.ಶಿ.ನಿ, ಬೆಂಗಳೂರು – ಸದರಿ ಜ್ಞಾಪನವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.
6. ಇಎಸ್‌ಟಿ(8) ವಿಭಾಗಕ್ಕೆ.
7. ಕಛೇರಿ ಪ್ರತಿ.